ಶ್ರೀ ಜಯಪ್ರಕಾಶ ಶೆಟ್ಟಿ.—ಈ ಸಸ್ಥಾನ್-ಕೋಡಿ ಫಿಷರೀಸ್ ರಸ್ತೆಯನ್ನು ನಿರ್ಮಿಸುವುದಕ್ಕೆ ಮಂಜೂರಾಗಿದ್ದ ಹಣವೆಷ್ಟು ಮತ್ತು ಖರ್ಚಾಗಿರತಕ್ಕ ಹಣವೆಷ್ಟು ?

† ಶ್ರೀ ಕೆ ಟಿ ರಾಥೋಡ್.—ಮಾನ್ಯ ಸದಸ್ಯರಿಗೆ ಗೊತ್ತಿರುವಹಾಗೆ ಮೊದಲು ಈ ಕೆಲಸಕ್ಕೆ ಎಂಟು ಲಕ್ಷ ಐದು ಸಾವಿರ ರೂಪಾಯಿಗಳ ಹಣ ಮಂಜೂರಾಗಿತ್ತು. ಆದರೆ ಅಲ್ಲಿಯ ಕೆಲವು ತೊಂದರೆಗಳಿಂದ ಅದನ್ನು ಬದಲಾಯಿಸಬೇಕಾಗಿ ಬಂದು, ಮತ್ತೆ ಆ ಕೆಲಸಕ್ಕೆ ಹೊಸ ಅಂದಾಜನ್ನು ತಯಾರಿಸಿ ಆ ಕೆಲಸವನ್ನು ಕೈಗೊಳ್ಳಲಾಯಿತು. ಅದಕ್ಕೆ ತಯಾರಾದ ಹೊಸ ಅಂದಾಜಿದ ಪ್ರಕಾರ ಆದ ವೆಚ್ಚ ಒಂದು ಲಕ್ಷ 44 ಸಾವಿರದ 800 ರೂಪಾಯಿಗಳು. ಈಗ ಈ ಕೆಲಸವನ್ನು ಮುಗಿಸಲಾಗಿದೆ.

ಶ್ರೀ ಜಯಪ್ರಕಾಶ ಶೆಟ್ಟಿ.—ತಾ! 30-10-1971ಕ್ಕೇ ಕೆಲಸ ಮುಗಿಯತೆಂದು ಹೇಳಿದ್ದರೂ ಇನ್ನೂ ಈ ಕೆಲಸ ಆಗದಿರುವುದಕ್ಕೆ ಕಾರಣವೇನು ?

ಶ್ರೀ ಕೆ. ಟಿ. ರಾಥೋಡ್.—ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಆ ರಸ್ತೆ ಕೆಲಸ ಪೂರ್ತಿಯಾಗಬೇಕಾಗಿದ್ದರೆ ಅಲ್ಲಿ ಒಂದು ಬ್ರಿಡ್ಜಿನ ಕೆಲಸ ಬರುತ್ತೆ. ಅದಕ್ಕೆ ಸುಮಾರು 10 ಲಕ್ಷ ರೂಪಾಯಿ ಖರ್ಚುಬರುತ್ತದೆ. ಇದಕ್ಕೆ ಈಗ ಒಂದು ಲಕ್ಷ ರೂಪಾಯಿಗಳನ್ನು ಪ್ರೊವೈಡ್ ಮಾಡಿ ಈ ಕೆಲಸವನ್ನು ಪಿ. ಡಬ್ಲ್ಯು. ಡಿ. ಮೂಲಕ ಅಂಡರ್ ರೂರಲ್ ಕಮ್ಯುನಿಕೇಷನ್ ಪ್ರೋಗ್ರಾಂನಲ್ಲಿ ಮುಂದು ವರಿಸಬೇಕೆಂದು ತಾರೀಕು 29-11-1972ರಲ್ಲಿ ತಿಳಿಸಿದ್ದೇವೆ, ಅವರು ಅದನ್ನು ಮಾಡುತ್ತಾರೆ.

ಶ್ರೀ ಎಸ್. ಎಂ. ಯಾಹ್ಯಾ.—ಈ ಫಿಷರೀಸ್ ರಸ್ತೆಗಳನ್ನು ಉತ್ತಮಗೊಳಿಸುವುದಕ್ಕೆ ಸರ್ಕಾರದವರು ಕೈಗೊಂಡಿರತಕ್ಕ ಕಾರ್ಯಕ್ರಮಗಳೇನು ?

ಶ್ರೀ ಕೆ.ಟಿ. ರಾಥೋಡ್.—ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಹಿಂದೆ 1967ರಲ್ಲಿ ಇದನ್ನು ಸರ್ಕಾರದವರು ಮಾಡುವುದಕ್ಕಾಗುವುದಿಲ್ಲ, ಇದನ್ನು ಆಯಾಯ ತಾಲ್ಲೂಕ್ ಡೆವಲಪ್‌ಮೆಂಟ್ ಬೋರ್ಡುಗಳಿಗೆ ವರ್ಗಾಯಿಸಬೇಕೆಂದು ತೀರ್ಮಾನ ಮಾಡಿ ನಮ್ಮ ಕಂಡೀಷನ್ ಪ್ರಕಾರ ಅವುಗಳಿಗೆ 500 ರೂಪಾಯಿ ಗ್ರಾಂಟನ್ನು ಕೊಟ್ಟು ಆ ಬೋರ್ಡುಗಳು 250 ರೂಪಾಯಿಗಳನ್ನು ಹಾಕಿ ಆ ರಸ್ತೆಗಳನ್ನು ಮೈಂಟೇನ್ ಮಾಡಬೇಕೆಂದಿತ್ತು. ಆದರೆ ಅವುಗಳಿಂದಲೂ ಇದು ಸಾಧ್ಯವಾಗಲಿಲ್ಲ. ಇತ್ತೀಚೆಗೆ ಇವುಗಳ ಮೈಂಟಿನೆನ್ಸ್ ಕೆಲಸವನ್ನು ಪಿ. ಡಬ್ಲ್ಯು. ಡಿ. ಗೆ ವಹಿಸಬೇಕೆಂದು ತೀರ್ಮಾನ ಮಾಡಿದ್ದೇವೆ, ಅವರು ಅದನ್ನು ಇನ್ನು ಮುಂದಕ್ಕೆ ನಡೆಸಿಕೊಂಡು ಹೋಗುತ್ತಾರೆ.

ಶ್ರೀ ಜಯಪ್ರಕಾಶ ಶೆಟ್ಟಿ.—ಈ ಕೆಲಸವನ್ನು ಇನ್ನೆಷ್ಟು ದಿನಗಳಲ್ಲಿ ಮುಗಿಸುತ್ತೀರಾ ?

ಶ್ರೀ ಕೆ. ಟಿ. ರಾಥೋಡ್.—ಅವರು ಹಂತ ಹಂತವಾಗಿ ಅದನ್ನು ತೆಗೆದುಕೊಂಡು ಪೂರ್ತಿ ಮಾಡುತ್ತಾರೆ.

Gradation List of Assistants of M.G.S.

467. Sri M. H. JAYAPRAKASH NARAYANA (Sirsi).—

Will the Chief Minister be pleased to state:—

(*a*) whether the Government has finalised the Gradation List of Assistants of Mysore Government Secretariat;

(*b*) if so, when it was prepared and when it was sent to the Mysore Public Service Commission in connection with the proposal for filling up the posts of Section Officers;

(*c*) the reasons for the inordinate delay in finalising the Seniority List of the Assistants?

SRI H. M. CHANNABASAPPA (Minister for Public Works and Electricity) [On behelf of Sri D. DEVARAJ URS) (Chief Minister).]—

(*a*) No.

(*b*) Gradation List of Assistants is not required to be sent to the Public Service Commission.

(*c*) The Final I.S.S. List of Assistants was prepared in 1965 which reflected the position as on 1-11-1956. Regarding Assistants appointed after 1-11-1956 after fixation of Seniority, etc., of Local Candidates regularised in 1960, 1961 and 1966 the matter was taken up in 1971 and a provisional Gradation List has been circulated inviting objections.

Sri M. H. JAYAPRAKASH NARAYANA.—I am only concerned with the Gradation list not the Inter State Seniority list. What is the reason for such inordinate delay and why Gradation list is not prepared even though 14 years have elapsed, who are the persons responsible for such inordinate dealy and have the Goverument taken any action on the officers and officials who are responsible for that ?

†ಶ್ರೀ ಎಚ್. ಎಂ. ಚನ್ನಬಸಪ್ಪ.—ಇದಕ್ಕೆ ಯಾವ ಅಧಿಕಾರಿಗಳೂ ಜವಾಬ್ದಾರರಲ್ಲ, ಆ ನನ್ನ ವೇಶವೇ ಜವಾಬ್ದಾರಿ. 1965ನೇ ಇಸವಿ ಆಗಸ್ಟ್‌ನಲ್ಲಿ ಒಂದು ಸೀನಿಯಾರಿಟಿ ಅಬ್ಜೆರು ಪಟ್ಟಿಯನ್ನು ತಯಾರಿಸಲಾಗಿತ್ತು. ಅದಾದನಂತರ ಆಗಿದ್ದ ರೂಲ್ಸ್‌ಪ್ರಕಾರ ಕೆಲವು ಜೂನಿಯರ್ ಅಸಿಸ್ಟೆಂಟ್ಸ್ ಪ್ರಮೋಷನ್ನಾಗಿ ಅಸಿಸ್ಟೆಂಟುಗಳಾದರು, ಅವರ ಜೊತೆಗೆ ಪಿ. ಎಸ್. ಸಿ. ನಿಂದ ಕೆಲವರನ್ನು ಆರಿಸಿ ಕಳುಹಿಸಲಾಯಿತು; ಅದಾದನಂತರ ಸ್ಟೇಟ್ ರೆವಲ್ ರೆಕ್ರೂಟ್‌ಮೆಂಟ್ ಕಮಿಟಿಯವರು ಕೆಲವರನ್ನು ಕಳುಹಿಸಿದರು; ಅನಂತರ ಲೋಕರ್ ಕ್ಯಾಂಡಿಡೇಟುಗಳಲ್ಲಿ ಕೆಲವರು ಇದಕ್ಕೆ ಸೇರಿಕೊಂಡರು. ಇವರ ಜೊತೆಗೆ ಇನ್ನು ಇತರೇ ಇರಾಖೆಗಳಿಂದ ಡೆಪ್ಯುಟೇಷನ್ ಮೇಲೆ ಬಂದಿದ್ದವರು ಕೆಲವರು ಸೇರಿಕೊಂಡರು. ಅಂತೂ ಒಟ್ಟಿಗೆ ಇವರೆಲ್ಲರ ಒಂದು ಸೀನಿಯಾರಿಟಿ ಪಟ್ಟಿಯನ್ನು ಸಮನ್ವಯಗೊಳಿಸಿ ಅದನ್ನು ತಾ|| 12-11- 971ರಲ್ಲಿ ಅಬ್‌ಜೆಕ್ಷನ್‌ಗಳನ್ನು ಕಾಲಫಾರ್ ಮಾಡತಕ್ಕ ಬಗ್ಗೆ ಅಡ್ವಪರ್ ಟೈಜ್‌ಮಾಡರಾಗಿದೆ. ಅದನ್ನು ನೋಡಿಕೊಂಡು ಇದರ ಅಂತಿಮ ತೀರ್ಮಾನ ಕೈಗೊಳ್ಳರಾಗುವುದು.

Sri M. H. JAYAPRAKASH NARAYANA.—The Hon'ble Minister explained the position. If there is any complicated procedure in preparing this Gradation list, has the Government consulted the Law Department, and if so, what is its opinion ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸರ್ಕಾರದವರು ಯಾವ ಕೆಲಸವನ್ನು ಮಾಡಬೇಕಾಗಿದ್ದರೂ ಲಾ ಇರಾಖೆಯನ್ನು ಕೇಳದೆ ಮಾಡುವುದಿಲ್ಲ. ಆ ಇರಾಖೆ ಇರುವುದೇ ಅದಕ್ಕೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಡೆಪ್ಯುಟೇಷನ್ ಬಂದವರನ್ನು ಮತ್ತು ಬೇರೆ ಜನರನ್ನು ಇವರಲ್ಲಿ ಸೇರಿಸಿ ಸೀನಿಯಾರಿಟಿ ಮಾಡುವಾಗ ಒಂದೇ ಆಫೀಸಿಗೆ ಸೇರಿ ಅಲ್ಲ ಕೆಲಸ ಮಾಡುತ್ತಿದ್ದವರಿಗೆ ಅದರಿಂದ ಅನಾನುಕೂಲವಾಗುವುದಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನಾಗಲೇ ಹೇಳಿದಂತೆ ಅವರೆಲ್ಲರನ್ನು ಸೇರಿಸಿ ಪಟ್ಟಿಯನ್ನು ತಯಾರಿಸಲಾಗಿದೆ. ಅದನ್ನು ಅಡ್ಜರ್‌ಟೈಜ್ ಮಾಡಿದೆ. ಅಬ್‌ಜೆಕ್ಷನ್ ಬಂದಮೇಲೆ ತೀರ್ಮಾನವಾಗುತ್ತೆ.